ಸಾಕ್ಷಿ ಯನ್ನು ದಿಃ 09.03.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಿಂದ**

1. ಟೇಬಲ್ ಮೇಲೆ ಇಟ್ಟಿದ್ದ ಚೆಕ್ಕಿನ ನಂಬರ್ ನನಗೆ ಗೊತ್ತಿಲ್ಲ. ಅದರ ಮೇಲೆ ನಾನು ದಿನಾಂಕ ಹಾಗೂ ಸಹಿ ಹಾಕಿರಲಿಲ್ಲ. ಅದು ಬೈಲಕುಪ್ಪೆ ಎಸ್.ಬಿ.ಐ ಚೆಕ್ ಆಗಿತ್ತು. ಸದರಿ ವಿಚಾರಗಳನ್ನು ಪ್ರತ್ಯುತ್ತರ ನೊಟೀಸಿನಲ್ಲಿ ತಿಳಿಸಲು ತೊಂದರೆ ಇತ್ತಾ ಎಂದರೆ, ಇಲ್ಲ.
2. ದೂರುದಾರರ ಮಗನ ಬಳಿ ಟ್ರಾಕ್ಟರ್, ಜೆಸಿಬಿ ಹಾಗೂ ಜಮೀನಿನಿಂದ 10-12 ಲಕ್ಷ ಆದಾಯ ಇರಬಹುದಾ ಎಂದರೆ ನನಗೆ ಗೊತ್ತಿಲ್ಲ.
3. ನಿಮ್ಮ ಮೇಲೆ ಒಂದು ಕೊಲೆ ಕೇಸ್ ದಾಖಲಾಗಿದೆ ಎಂದರೆ ನನ್ನ ಪತ್ನಿ ಹಾಗೂ ಮಗಳ ಮೇಲೆ ಇದೆ. ಅದರಲ್ಲಿ ನೀವು ಜೈಲಿಗೆ ಹೋಗಿದ್ದೀರಿ ಎಂದರೆ ಸರಿಯಲ್ಲ, ನನ್ನ ಪತ್ನಿ ಹಾಗೂ ನನ್ನ ಮಗಳು ಹೋಗಿದ್ದರು. ಸದರಿ ಕೇಸ್ ಮುಕ್ತಾಯವಾಗಿದೆ.
4. ನಿಮ್ಮ ಮಗಳು ಹಾಗೂ ಪತ್ನಿಗೆ ಬೇಲ್ ಕೊಡಿಸಲು ನಿಮಗೆ ಹಣದ ಅವ್ಯಕತೆ ಇತ್ತು ಎಂದರೆ, ಇಲ್ಲ ಎಂದು ನುಡಿಯುತ್ತಾರೆ.
5. ನಿಮ್ಮ ಪತ್ನಿ ಹಾಗೂ ಮಗಳು ಜೈಲಿನಲ್ಲಿದ್ದಾಗ, ನಿಮ್ಮ ಮಗಳ ಒಡವೆಗಳನ್ನು ಗಿರವಿ ಇಟ್ಟಿದ್ದೀರಿ ಎಂದರೆ, ಇಟ್ಟಿದ್ದೆ ಆದರೆ ಬಿಡಿಸಿಕೊಂಡಿದ್ದೇನೆ. ಆ ಕಾರಣಕ್ಕೆ ನಿಮ್ಮ ಅಳಿಯ ನಿಮ್ಮ ಮಗಳನ್ನು ನಿಮ್ಮ ಮನೆಯಲ್ಲೇ ಬಿಟ್ಟಿದ್ದರು ಎಂದರೆ ಸರಿಯಲ್ಲ. ಆ ಕಾರಣಕ್ಕೆ ನಿಮಗೆ ಒಡವೆಗಳನ್ನು ಬಿಡಿಸಲು ಹಣಕಾಸಿನ ಅಗತ್ಯ ಇತ್ತು ಎಂದರೆ ಸರಿಯಲ್ಲ.
6. ಆ ಕಾರಣಕ್ಕೆ ನೀವು ನಿಮಗೆ ಪರಿಚಯ ಇರುವ ದೂರುದಾರರ ಬಳಿ ನೀವು ನಿಮ್ಮ ಸ್ನೇಹಿತರ ಜೊತೆ ಹೋಗಿ ನೀವು 6 ಲಕ್ಷ ಹಣವನ್ನು ಸಾಲವಾಗಿ ಪಡೆದುಕೊಂಡಿದ್ದೀರಿ ಎಂದರೆ ಸರಿಯಲ್ಲ.
7. ಸದರಿ ಸಾಲ ಪಡೆದ ನಂತರ ಒಂದು ತಿಂಗಳಲ್ಲಿ ಜಮೀನು ಮಾರಾಟ ಮಾಡಿ ಹಣ ವಾಪಸ್ ಕೊಡತ್ತೇನೆ ಎಂದು ತಿಳಿಸಿದ್ದೀರಿ ಎಂದರೆ ಸರಿಯಲ್ಲ.
8. ನಂತರ ಒಂದು ತಿಂಗಳ ನಂತರ ನೀವು ಕೊಡದ ಕಾರಣ ಸಾಲ ವಾಪಸ್ ಕೇಳಿದಾಗ, ಜಮೀನು ಖರೀದಿಸಿದವರು ಖಾತೆಗೆ ಹಣ ಕಾಹಾದ್ದಾರೆ ಎಂದು ಹೇಳಿ ನಿಪಿ - 1ರ ಚೆಕ್ಕನ್ನು ದೂರುದಾರರಿಗೆ ನೀವು ನೀಡಿದ್ದೀರಿ ಎಂದರೆ ಸರಿಯಲ್ಲ.

9. ಸದರಿ ಚೆಕ್ಕನ್ನು ದೂರುದಾರರು ಬ್ಯಾಂಕಿಗೆ ಹಾಜರುಪಡಿಸಿದಾಗ ಬ್ಯಾಂಕಿನವರು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂದು ಹಿಂಬರಹ ನೀಡಿದ್ದಾರೆ ಎಂದರೆ ಸರಿಯದ್ದರು ಎಂದರೆ ಸರಿಯಲ್ಲ. ಅದಕ್ಕೆ ನೀವು ಸ್ಪಂದಿಸದ ಕಾರಣ ನೊಟೀಸು ಸಹ ಕಳುಹಿಸಿದ್ದರು ಎಂದರೆ, ನೊಟೀಸು ಬಂದಿತ್ತು ಎಂದು ನುಡಿಯುತ್ತಾರೆ.

10. ದೂರುದಾರರ ಬಳಿ ಸಾಲ ಪಡೆದಿದ್ದರೂ ಸಹ ಅದರ ಮರುಪಾವತಿ ಮಾಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ